ಡಾ: ಹೆಚ್. ಸಿ. ಮಹದೇವಪ್ಪ:– ನನ್ನ ಕ್ಷೇತ್ರವನ್ನೂ ಮುನಿಸಿಪಾಲಿಟಿ ಮಾಡಬೇಕು, ಅದಕ್ಕೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು:– ಮಾನ್ಯ ಸತ್ಯನಾರಾಯಣರವರೇ, ಮಾನ್ಯ ರೇವು ನಾಯಕ್‌ರವರ ಪ್ರಶ್ನೆಗೆ ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಬೇಕು.

(ಏ) ವಿಷಯ : ಮೀಸಲು ಕ್ಷೇತ್ರವಾದ ಕಮಲಾಪುರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಂತ್ರಿಗಳಿಂದ ಉತ್ತರ.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರೇವು ನಾಯಕ್‌ರವರು, ಕಮಲಾಪುರ ಕ್ಷೇತ್ರದ ಗ್ರಾಮಗಳಾದ ದೊಂಗರಗಾಂವಗೋಗಿ ತಾಂಡ, ಗುಂಜಾ ಬಬ್ಲಾದ ಹರಿಹರ ತಾಂಡ, ಸಂಗೊಳಗಿ ಸಿ, ದಿನಸಿ ತಾಂಡಗಳಲ್ಲಿ, ಉಂಟಾಗಿರುವಂತಹ ನೀರಿನ ಸಮಸ್ಯೆಯ ಕುರಿತು, ನನ್ನ ಗಮನವನ್ನು ಸೆಳೆದಿದ್ದಾರೆ. ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು, ನಾನು ತಕ್ಷಣವೇ ಇವತ್ತೆ ಅವರೊಡನೆ ಟೆಲಿಫೋನ್‌ನಲ್ಲಿ ಮಾತನಾಡಿ, ಅಲ್ಲಿ ಏನು ತೊಂದರೆ ಇದೆ. ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಕೊಡಿ, ಎಂದು ನಾನು ನಿರ್ದೇಶನವನ್ನು ಕೊಟ್ಟಿದ್ದೇನೆ.

(ಐ) ವಿಷಯ : ಹಂಪಿಯ ಐತಿಹಾಸಿಕ ಪರಂಪರೆಯನ್ನು ಉಳಿಸಿಕೊಳ್ಳಲು ಸದನ ಸಮಿತಿ ನೇಮಕ ಮಾಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ನಾನು ನಾಲ್ಕೈದು ನಿಮಿಷಗಳ ಮೇಲೆ ನಾನು ತೆಗೆದುಕೊಳ್ಳುವುದಿಲ್ಲ. ನನಗೆ ನನ್ನ ಜವಾಬ್ದಾರಿ ಅರ್ಥವಾಗುತ್ತದೆ. ಇಲ್ಲಿ ಬಹಳ ಗಂಭೀರವಾದದ್ದು, ಇದಕ್ಕೆ ಯಾರು ಉತ್ತರವನ್ನು ಕೊಡುತ್ತಿರೋ, ದಯಮಾಡಿ ಕೊಡಿ. ನಮ್ಮ ವಿಶ್ವವಿಖ್ಯಾತ ಹಂಪೆಯನ್ನು ಉಳಿಸಿ ಎಂದು, ಒಂದು ಅಂಧೋಳನ ಹೊಸಪೇಟೆಯ ಶ್ರೀ ಅಚ್ಯುತ ದೇವರಾಯರ ಅಧ್ಯಕ್ಷತೆಯಲ್ಲಿ, ರಾಜ್ಯಮಟ್ಟದ ಒಂದು ಸಮಿತಿಯಾಗಿ, ಅದರಲ್ಲಿ ಡಾ: ಎಂ. ಚಿದಾನಂದ ಮೂರ್ತಿಯವರೆಲ್ಲಾ ಅಲ್ಲಿ ಸೇರಿಕೊಂಡು, ಅದರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಮೊನ್ನೆ ಪತ್ರಿಕಾ ಗೋಷ್ಠಿಯಲ್ಲಿ ಅದರ ಎಲ್ಲಾ ವಿವರಗಳು ಬಂದಿದೆ. ತಮಗೆ ಎಲ್ಲಾ ಗೊತ್ತಿರುವಂತೆ ಮಾನ್ಯ ಜೆ. ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾರ, ಇದರ ಬಗ್ಗೆ ಬಹಳಷ್ಟು ಚರ್ಚೆಗಳಾಗಿ, ಆ ಸಂದರ್ಭಗಳಲ್ಲಿ ಆ ತೀರ್ಥಕ್ಷೇತ್ರದಲ್ಲಿ ಹಿಪ್ಪಿಗಳಿಂದ ಆಗುತ್ತಿರುವಂತಹ ಮಾಲಿನ್ಯದ ಬಗ್ಗೆ ಅವರು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರು. ಅದು ಆದಮೇಲೆ ಏನಾಯಿತೆಂಬುದು ಗೊತ್ತಿಲ್ಲ. ಅಲ್ಲಿ ವಿರೋಪಾಪುರ ಎಂಬ ದ್ವೀಪದ ರೆಸಾರ್ಟ್ ಅದು ಹಿಪ್ಪಿಗಳ ಕಾಮಕ್ರೀಡೆಗಳಿಗೆ ಒಂದು ಕೇಂದ್ರವಾಗಿದೆಯೆಂಬುದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿದೆ. ಈ ಹಂಪಿಯಲ್ಲಿ ಚರಸ್, ಗಾಂಜಾ, ಮಾದಕ ದ್ರವ್ಯಗಳು ಯಥೇಚ್ಛವಾಗಿ ಮಾರಾಟಗಾಗುತ್ತಿದೆ, ಎಂಬ ಸಂಗತಿಯು